BKN-04

Sl.No. :

Total No. of Pages : 2

ಪ್ರಥಮ ಚತುರ್ಮಾಸ ಬಿ.ಎಸ್ಸಿ./ಬಿ.ಸಿ.ಎ./ಬಿ.ಬಿ.ಎ./ಬಿ.ಎಸ್ಸಿ.ಐಟಿ./ಬಿ.ಎಸ್ಸಿ(ಹೆಚ್ ಎಸ್)/ ಬಿ.ಎಸ್.ಡಬ್ಲ್ಯೂ. ಪದವಿ ಪರೀಕ್ಷೆ, ಜೂನ್/ಜೂಲೈ - 2024

(CBCS, SLM Scheme)

ಕನ್ನಡ

ಹೊಸಗನ್ನಡ ಕವಿತೆಗಳು ಮತ್ತು ಆಡಳಿತ ಕನ್ನಡ (ಪತ್ರಿಕೆ–೧)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : **ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.**

ವಿಭಾಗ–ಎ

ಪ್ರ1) ಯಾವುದಾದರೂ ಒಂದಕ್ಕೆ ಭಾವ ಸ್ವಾರಸ್ಯ ಬರೆಯಿರಿ: **[1×5=5]**

೧ ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ
ಎಲ್ಲಿ ಮುಗಿಲಲಿ ಮಿಂಚಿನೊಲ್ ಕಾವೇರಿ ಹೊಳೆಹೊಳೆವಳೋ
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆವಳೋ

೨) ನಮ್ಮೂರ
ಬಂಡೆ ಬಂಡೆಯ ಮೇಲೆ
ಪ್ರಗತಿ ಪಂಥದ ಹಾಡು
ಇಲ್ಲಿಯ
ನಾಯಿ ನರಿಗಳೂ
ಸಮಾನತೆಯಿಂದ ಬೊಗಳುತ್ತವೆ.

ಪ್ರ2) ಯಾವುದಾದರೂ ಮೂರು ವಿಷಯಗಳಿಗೆ ಟಿಪ್ಪಣಿ ಬರೆಯಿರಿ: **[3×5=15]**

೧) 'ದಾಸಿಮಯ್ಯ ಮತ್ತು ಬೆಕ್ಕು' ಕವಿತೆಯ ಆಶಯ.

೨) 'ತುಂಗಭದ್ರೆ' ಕವಿತೆಯ ವೈಶಿಷ್ಟ್ಯ.

೩) ಗೋಪಾಲಕೃಷ್ಣ ಅಡಿಗ.

೪) ನವ್ಯ ಸಾಹಿತ್ಯ.

೫) 'ಜಾಜಿ ಮಲ್ಲಿಗೆ' ಕವಿತೆಯ ವಸ್ತು.

ವಿಭಾಗ–ಬಿ

ಪ್ರ3) ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ: **[3×10=30]**

೧) 'ನೀಹಿಂಗ ನೋಡಬ್ಯಾಡ' ಕವಿತೆಯಲ್ಲಿ ಶೋಕಭಾವನೆ ಹೇಗೆ ಮಡುಗಟ್ಟಿದೆ? ವಿವರಿಸಿ.

೨) ಸರ್ವ ಸಮಾನತೆಯ ಸಮಾಜದ ಆಶಯ 'ಶ್ರೀ ಸಾಮಾನ್ಯರ ದೀಕ್ಷಾಗೀತೆ'ಯಲ್ಲಿ ವ್ಯಕ್ತವಾಗಿರುವ ರೀತಿಯನ್ನು ನಿರೂಪಿಸಿ.

೩) ನೀರಿಗೂ ಜೀವಸಂಕುಲಕ್ಕೂ ಇರಬಹುದಾದ ನಿಕಟ ಸಂಬಂಧವನ್ನು 'ಗಂಗಾಮಾಯಿ' ಕವಿತೆ ಹೇಗೆ ಚಿತ್ರಿಸಿದೆ? ವಿವರಿಸಿ.

೪) ತನ್ನ ಸಮಕಾಲೀನ ಭಾರತದ ಚಿತ್ರಣವನ್ನು 'ಪುರುಷ ಸೂಕ್ತ' ಕವಿತೆ ಹೇಗೆ ಕಟ್ಟಿಕೊಡುತ್ತದೆ ವಿವರಿಸಿ.

೫) ಕನ್ನಡ ಕಾವ್ಯದ ಇತಿಹಾಸವನ್ನು 'ಕಾಲ ನಿಲ್ಲುವುದಿಲ್ಲ' ಕವಿತೆಯಲ್ಲಿ ಕವಿ ಹೇಗೆ ಬಣ್ಣಿಸಿದ್ದಾರೆ ನಿರೂಪಿಸಿ.

ವಿಭಾಗ–ಸಿ

ಆಡಳಿತ ಕನ್ನಡ (30 ಅಂಕಗಳು)

ಪ್ರ4) ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ: **[3×10=30]**

೧) ಆಡಳಿತ ಭಾಷೆಯ ಸ್ವರೂಪ ಮತ್ತು ಲಕ್ಷಣಗಳನ್ನು ನಿರೂಪಿಸಿ.

೨) ಅಧಿಕೃತ ಪತ್ರ ಎಂದರೇನು? ಅದನ್ನು ಬರೆಯುವ ಸಂದರ್ಭಗಳಾವುವು? ಮಾದರಿ ಪತ್ರದೊಡನೆ ನಿರೂಪಿಸಿ.

೩) ಹುದ್ದೆಗಳ ಜಾಹಿರಾತು ಎಂದರೇನು? ಅದರ ಸ್ವರೂಪ ಮತ್ತು ಲಕ್ಷಣಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

೪) ಅರ್ಜಿ ಎಂದರೇನು? ಅದರ ವಿವಿಧ ಅಂಗಗಳಾವುವು? ಮಾದರಿಯೊಂದಿಗೆ ವಿವರಿಸಿ.

೫) ಮಾಹಿತಿ ತಂತ್ರಜ್ಞಾನ ಎಂದರೇನು? ಕನ್ನಡದಲ್ಲಿ ಅದರ ಸ್ವರೂಪ ಮತ್ತು ಮಹತ್ವವನ್ನು ವಿವರಿಸಿ.